ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಭಾರತದಲ್ಲಿ ಅನೇಕ ಗುರುತರ ಪ್ರೇಕ್ಷಣೀಯ ಸ್ಥಳಗಳನ್ನು ಹೆಚ್ಚು ಸಂಖ್ಯೆಯಲ್ಲಿ ಭೇಟಿ ಮಾಡಲು ಆಕರ್ಷಿಸುವುದಕ್ಕಾಗಿ ಕೇಂದ್ರ ಸರ್ಕಾರವು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆ. ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

೧) ನಾಲ್ಕು ಭಾರಿ ಪ್ರಮಾಣದ ಹಬ್ಬಗಳ ಆಚರಣೆ.

೨) 'ಭಾರತ ಸಂದರ್ಶನದ' ಮೊದಲಿಗೆ ಅನೇಕ ಸ್ಥಳಗಳಲ್ಲಿ ಕಟ್ಟಡಗಳ ನಿರ್ಮಾಣಕಾರ್ಯವನ್ನು ಸಂಪೂರ್ಣಗೊಳಿಸುವುದು.

೩) ವಿಕಾಸ ಪ್ರಚಾರ ಸಾಮಗ್ರಿಗಳನ್ನು ಹೊರತರಲಾಗಿದೆ.

೪) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳ ಗಣಮಟ್ಟವನ್ನು ಅಭಿವೃದ್ಧಿಗೊಳಿಸುವುದು.

೫) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಸತಿ ಸೌಕರ್ಯವನ್ನು ದುರಸ್ತಿಗೊಳಿಸಲಾಗುತ್ತಿದೆ.

೬) ಗುಡಾರಗಳ ವಸತಿ ಸೌಕರ್ಯಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.

ಆ) ಕೇಂದ್ರ ಸರ್ಕಾರವು ಹೆಚ್ಚಿನ ಹಾಗೂ ಗಾಢವಾದ ಪ್ರಚಾರಕ್ಕಾಗಿ ಕೆಲವು ಮಾರ್ಗಗಳನ್ನು ಗುರುತಿಸಿರುತ್ತದೆ. ಇವುಗಳ ಪೈಕಿ ಬಿಜಾಪುರ, ಬಾದಾಮಿ ಐಹೊಳೆ, ಪಟ್ಟದಕಲ್ಲು, ಹಂಪಿ, ಬೀದರ್, ಮೈಸೂರು ಬೆಂಗಳೂರು, ಬಂಡಿಪುರ, ನಾಗರಹೊಳೆ, ಹಳೇಬೀಡು ಮತ್ತು ಬೇಲೂರು ಸೇರಿರುತ್ತವೆ.

ಇ) ಇದಕ್ಕಾಗಿಯೇ ಪ್ರತ್ಯೇಕ ಹಣ ನಿಗದಿಮಾಡಿಲ್ಲ.

ಈ) ಇಲ್ಲ.

ಬಿ. ಟಿ. ಎಸ್. ಮತ್ತು ಕೆ.ಎಸ್.ಆರ್.ಟಿ. ಸಿ. ಬಸ್ ದರಗಳು

೫೨೨ ಶ್ರೀ ರಾಮಲಿಂಗರೆಡ್ಡಿ (ಜಯನಗರ).— ಮಾನ್ಯ ಸಾರಿಗೆ [ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ನಗರ ಸಾರಿಗೆ ಮತ್ತು ರಾಜ್ಯ ಸಾರಿಗೆ ಪ್ರಯಾಣ ದರಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಸಾರ್ವಜನಿಕರಿಂದ ದೂರುಗಳೇನಾದರೂ ಸರ್ಕಾರದವರಿಗೆ ಬಂದಿವೆಯೆ :

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರ ಸ್ಪಷ್ಟ ನಿಲುವೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹೌದು.

ಆ) ಪ್ರಯಾಣಿಕರ ಅಭಿಪ್ರಾಯಗಳನ್ನು ಗಮನಿಸಿ, ನಗರ ಸಾರಿಗೆ ದರವನ್ನು ದಿನಾಂಕ ೮-೫-೧೯೯೦ರಿಂದ ಕಡಿತಗೊಳಿಸಲಾಯಿತು. ಮತ್ತೊಮ್ಮೆ ನಗರ ಸಾರಿಗೆ ಹೊರ ವಲಯ ಸಾರಿಗೆ ಹಾಗೂ ಗ್ರಾಮಾಂತರ ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳ ದರಗಳನ್ನು ದಿನಾಂಕ ೩-೬-೧೯೯೦ ಹಾಗೂ ೫-೬-೧೯೯೦ ರಿಂದ ಶೇಕಡಾ ೨೫ಕ್ಕೆ ಮಿತಿಗೊಳಿಸಿ ಮರುವಿಮರ್ಷಿತ ದರಗಳ ಹತ್ತಿರದ ಹೆಚ್ಚಿನ ೨೫ ಪೈಸೆಯ ಭಾಜ್ಯ ಸಂಖ್ಯೆಗೆ ತಂದು ಕಡಿತಗೊಳಿಸಲಾಯಿತು.

ಸರ್ಕಾರದ ವಸತಿ ಗೃಹಗಳು

೫೪೦. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಜೀವನಭೀಮಾನಗರ, ಹೊಂಬೇಗೌಡ ನಗರ, ಲಾಲ್‌ಬಾಗ್ ಸಿದ್ದಾಪುರ ಹಾಗೂ ರಾಜಾಜಿನಗರ ಸರ್ಕಾರಿ ವಸತಿ ಗೃಹಗಳಿಗೆ ಕಲ್ಪಿಸಲಾಗಿರುವ ಸೌಲಭ್ಯಗಳಲ್ಲಿ ವ್ಯತ್ಯಾಸಗಳೇನಾದರೂ ಇವೆಯೆ ;